## ಕಳೆದ ಸಂಚಿಕೆಯಲ್ಲಿ



ಇರುಳು ಬೆಳಕಾಗುವಷ್ಟರಲ್ಲಿ ಕಮಲಾ ಮನೆಯಿಂದ ಕಣ್ಮರೆಯಾದುದು ಶಿವರಾಮನ ಮನೆಯಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿತು. ಮನೆಯ ಹೆಣ್ಣುಮಗಳು ಒಂಟಿ ಬದುಕಿಗೆ ಬೇಸತ್ತು ಜೀವ ಕಳೆದುಕೊಂಡಳೋ ಅಥವಾ ಯಾವುದೋ ಮೋಹನ ಮುರಳಿಗೆ ಓಗೊಟ್ಟು ಮನೆಯಿಂದ ಹೊರ ನಡೆದಳೋ ಎನ್ನುವುದು ತಿಳಿಯದೆ ಎಲ್ಲರೂ ಕಂಗಾಲಾದರು. ಕಮಲಾಳ ನಿಗೂಢ ಕಣ್ಮರೆ ಸೀತಾಲಕ್ಷ್ಮಿಗೆ ಒಗಟಾಗಿ ಪರಿಣಮಿಸಿತು. ತನ್ನೊಂದಿಗೆ ಆಪ್ತಳಾಗಿದ್ದ ಕಮಲಾ ಒಂದು ಮಾತೂ ಹೇಳದೆ ಹೋದುದು ಸೀತಾಲಕ್ಷ್ಮಿಗೆ ವೇದನೆ ತಂದರೂ, ಹೊಟ್ಟೆಯೊಳಗೆ ಬೆಳೆಯುತ್ತಿದ್ದ ಕರುಳಕುಡಿ ಗಮನವನ್ನು ತನ್ನತ್ತ ಸೆಳೆದಿತ್ತು. ಈ ನಡುವೆ ಸೀತಾಲಕ್ಷ್ಮಿ, ಗಂಡ ಶಿವರಾಮ ಹಾಗೂ ಅವನ ನಾದಿನಿ ಕನಕನ ನಡುವೆ ಮಾತಿನ ಚಕಮಕಿ ಶುರುವಾಯಿತು. ಭಾವನ ಮಾತಿಗೆ ಕನಕ ಸೊಪ್ಪು ಹಾಕುವ ಹೆಣ್ಣಾಗಿರಲಿಲ್ಲ. ತಳಮಳದಿಂದಲೇ ಹೆರಿಗೆಗೆಂದು ಸೀತಾಲಕ್ಷ್ಮಿ ತವರಿಗೆ ಹೊರಟಳು.

ಕೊಟ್ಟ ಮನೆಯಿಂದ ಹೊರಟು ನಿಂತಳು. 'ನಿಂಗೇನು ಹುಚ್ಚೇ? ಎಳೇ ಬೊಮ್ಮಟೆ ಕಟ್ಗೊಂಡು ಎಲ್ಲಿಗೇಂತ ಹೋಗ್ತಿ?' ಅಂದಳಂತೆ ಸೀತಾಲಕ್ಷ್ಮಿಯ ಅಮ್ಮ. ಆರ್ಥಿಕವಾಗಿ ಕೈ ಸುಟ್ಟುಕೊಳ್ಳುವಂತಾಗದೆ ಮನೆಗೆಲಸದ ಹೊರೆ ಅರ್ಧಕ್ಕರ್ಧ ಕಮ್ಮಿಯಾಗಿದ್ದು ಅವಳಿಂದ ಇಂಥ ಮಾತಾಡಿಸಿರಲೂಬಹುದು. ಇಷ್ಟಕ್ಕೂ ಸೀತಾಲಕ್ಷ್ಮಿ ದೇವಕಿಯನ್ನು ಯಾವತ್ತೂ ನೆನಪು ಮಾಡಿಕೊಳ್ಳುತ್ತಿದ್ದವಳೇನಲ್ಲ. ಇದೀಗ ತನ್ನ ಬುಡಕ್ಕೇ ಬಂದ ಮೇಲೆ ಪದೇ ಪದೇ ನೆನಪಾಗುತ್ತಿದ್ದಳು ದೇವಕಿ. ಕಮಲತ್ತಿಗೆ ಇಂತಾದ್ದೇನೋ ಪೇಚಿನ ಪ್ರಸಂಗಕ್ಕೆ ಪಕ್ಕಾಗಿ ಮನೆ ತೊರೆದು ಹೋಗಿರಬಹುದಾದ ಸಾಧ್ಯತೆ ಇದ್ದೇ ಇದೆ. ಹುಟ್ಟಿ ಬೆಳೆದ ಪರಿಸರದಲ್ಲಿ ಜಾತಿ ಕಳೆದುಕೊಂಡು ಅಪಹಾಸ್ಯಕ್ಕೀಡಾಗಿ ಬದುಕು ಮಾಡುವುದು ಸೂಕ್ಷ್ಮ ಮನಸ್ಸಿನವರಿಗೆ ಸುಲಭದ ಮಾತೇನಲ್ಲ. ಮನೆಯವರೇ ಕುಕ್ಕಿ ಕುಕ್ಕಿ ತಿನ್ನಬಹುದು. ಹೀನಾಯದ ಮಾತಾಡಬಹುದು. ಶಿವರಾಮ ಒಬ್ಬನೇ ಸಾಕಲ್ಲ? ಈ ರಗಳೆಯೇ ಬೇಡವೆಂದು ಕಣ್ಮರೆಯಾಗಿ ಹೋಗಿದ್ದರೆ ಆಶ್ಚರ್ಯವಿಲ್ಲ.

ತೌರುಮನೆಯಲ್ಲಿ ದೇವಕಿಯನ್ನು ಕಂಡಾಗ ಮತ್ತೆ ಕಮಲನ ನೆನಪು ಕೆರಳಿದಂತಾಗಿತ್ತು ಸೀತಾಲಕ್ಷ್ಮಿಗೆ. ಎಲ್ಲಿದ್ದಾಳೋ, ಹೇಗಿದ್ದಾಳೋ, ಗಂಡನ ಊಹೆ ಸತ್ಯವಾ ಅಥವಾ ಸುಳ್ಳಾ? ಯಾವೊಂದು ನಿರ್ಧಾರಕ್ಕೂ ಬರಲಾಗದ ದ್ವಂದ್ವ. ಬಾಣಂತಿಯಾಗಿದ್ದ ದೇವಕಿಯನ್ನು ತಮ್ಮಲ್ಲೇ ಉಳಿಸಿಕೊಳ್ಳಲು ಆಗ ಅವಳ ಅಮ್ಮ ಹಚ್ಚಿದ ಬೆಣ್ಣೆ ಕೆಲಸ ಮಾಡಲಿಲ್ಲ. ಹೇಳಿದಳಂತೆ ದೇವಕಿ,

'ಇಷ್ಟು ದಿನ ಮನೆಮಗಳ ಹಂಗೆ ನೋಡ್ಕಂಡ್ರಿ. ಇನ್ನೂ ಇಲ್ಲೇ ಗೂಟ ಹೊಡ್ಕಂಡಿದ್ರೆ ನೋಡೋರ ಕಣ್ಣಿಗೆ ಚೆನ್ನಾಗಿರಲ್ಲ. ದೇವರು ರಟ್ಟೇಲಿ ಶಕ್ತಿ ಕೊಟ್ಟಿದಾನೆ. ಕೆಲಸಕ್ಕೆ ಕಳ್ಳತನ ಮಾಡಲ್ಲ ಅಂದ್ರೆ ಯಾರಾರೂ ಅಕ್ಷತೆ ಕೊಟ್ಟು ಕರೀತಾರೆ. ತುತ್ತು ಅನ್ನ ಹಾಕ್ತಾರೆ. ದೇವ್ರು ಪೂರಾ ಬಿಟ್ಟು ಹಾಕಲ್ಲ ಅನ್ನೋಕೆ ನೀವೇ ಇದೀರಲ್ಲ ಸಾಕ್ಷಿ...'

'ಅದೇನು ವರ ಕೊಟ್ಟ ಅಂತ ದೇವ್ರನ್ನ ಹಾಡಿ ಹೊಗಳ್ತಿದ್ಯೇ?' ಅಮ್ಮ ಕೇಳಿದ್ದಳಂತೆ.

'ಗಂಡು ಮಗೂನ ಮಡಿಲಿಗೆ ಹಾಕಿದ್ದು ಸುಳ್ಳಾ? ಹತ್ತು ಹನ್ನೆರಡು ವರ್ಷ ಹಲ್ಲು ಕಚ್ಚಿ ಸಾಕಿದ್ರೆ ಆಮೇಲೆ ಅವನೇ ದುಡಿದು ಹಾಕ್ತಾನೆ. ಹೆಣ್ಣಾಗಿದ್ರೆ ಕಷ್ಟ ಇತ್ತು ಕಣ್ರೀ. ಸಾಕಿ ದೊಡ್ಡ ಮಾಡೋವರೆಗೆ ಒಂಥರ ಕಷ್ಟ. ದೊಡ್ಡ ಆದ್ಮೇಲೆ ಮತ್ತೊಂಥರ ಕಷ್ಟ.'

ಹೌದೆನ್ನಿಸಿತ್ತಂತೆ ಸೀತಾಲಕ್ಷ್ಮಿಯ ಅಮ್ಮನಿಗೂ. ಕೊನೇ ಪ್ರಯತ್ನ ಎಂಬಂತೆ ಮತ್ತೆ ಕೇಳಿದ್ದಳಂತೆ ಅಮ್ಮ, 'ಇಲ್ಲೇ ಇದ್ಬಿಡು ಮಾರಾಯ್ತೀ. ನಿನ್ನ ಮಗ ದೊಡ್ಡೋನಾದ್ಮೇಲೆ ಇಸ್ಕೂಲಿಗೆ ಹಾಕಣ. ಭರ್ತಿ ಓದಿ ದೊಡ್ಡ ಅಮಲ್ದಾರ ಆಗಿ ನಿನ್ನ ತೂಗುಮಂಚದ ಮೇಲೆ ಕೂರ್ಸಿ ತೂಗ್ತಿ.'

'ಇಸ್ಕೂಲಿಗೆ ಹಾಕೋ ಕಾಲಕ್ಕೆ ನೋಡಣ...' ಅಂದಳೇ ಹೊರತು ದೇವಕಿ ಅಲ್ಲಿ ಉಳಿಯಲಿಲ್ಲ.

'ನೋಡೋರ ಕಣ್ಣಿಗೆ ಚೆನ್ನಾಗಿರಲ್ಲ ಕಣ್ರೀ. ಭಟ್ರ ಮನೇಲಿ ದೇವಕಿಗೆ ನೆಲ ಸುಟ್ಟು ಅನ್ನ ಹಾಕಿದಾರೆ ಅಂತ ನೆಗಾಡ್ತಾರೆ. ನಾಲಿಗೆಗೆ ಲಗಾಮು ಇಲ್ದೋರು ಏನು ಬೇಕಾದ್ರೂ ಕತೆ ಕಟ್ತಾರೆ. ಅದಕ್ಕೇ ನಾನು ನಿಶ್ಚಯ ಮಾಡ್ಕಂಡಿದೀನಿ, ಒಂದು ಮನೇಲಿ ಯಾವತ್ತೂ ಕಚ್ಕಂಡು ಕೂರಲ್ಲ. ಹಂಗಂತ ನಿಮ್ಮ ಉಪಕಾರ ಮರೀತೀನಿ ಅಂತಲ್ಲ. ಏನೇ ಅನು ಆಪತ್ತು ಬಂದ್ರೂ ಒಂದು ವರ್ತಮಾನ ಕಳಿಸಿ. ಬಿಟ್ಟಿದ್ದು ಬಿಟ್ಟ ಹಾಗೆ ಬಂದ್ಬಿಡ್ತೀನಿ...'

'ನಿಂಗೆ ನಿಂದೇ ಹಟ...' ಅನ್ನುತ್ತಲೇ ಅಮ್ಮ ಪಾಯಸದಡುಗೆ ಮಾಡಿ, ತನ್ನ ಹತ್ತಿರ ಇದ್ದ ಒಂದು ಹೊಸ ಸೀರೆ ಉಡಿಸಿ, ಮಗುವಿನ ಕೈಗೆ ಧಾರಾಳವಾಗಿ ಐದು ರೂಪಾಯಿ ಇಟ್ಟು ಕಳಿಸಿಕೊಟ್ಟಿದ್ದಳಂತೆ. ಐದು ರೂಪಾಯಿ ಅಂದರೆ ಆ ಕಾಲದಲ್ಲಿ ಸಣ್ಣ ಮೊತ್ತವೇನಲ್ಲ. ಅಮ್ಮ ತನ್ನ ಕಾರ್ಪಣ್ಯದ ನಡುವೆಯೂ ಅಪ್ಪನನ್ನು ಬೇಡಿ ಐದು ರೂಪಾಯಿ ಕೊಟ್ಟು ಕಳಿಸಿದಳು ಅಂದರೆ ಅದು ದೊಡ್ಡ ಮಾತೇ.

ಮಗನ ಬಗ್ಗೆ ಏನೇನು ಕನಸು ಕಟ್ಟಿಕೊಂಡಿದ್ದಳೋ ದೇವಕಿ? ಹೆತ್ತ ಮಕ್ಕಳ ಬಗ್ಗೆ ಯಾವ ಅಮ್ಮ ಕನಸುವುದಿಲ್ಲ? ಅಮಲ್ದಾರಿಕೆಯ ಹುಚ್ಚನ್ನು ಹತ್ತಿಸಿಟ್ಟಿದ್ದಳು ಸೀತಾಲಕ್ಷ್ಮಿಯ ಅಮ್ಮ. ಮುಂದೆ ದೇವಕಿ ಕಾಲಲ್ಲಿ ಚಕ್ರ ಕಟ್ಟಿಕೊಂಡು ತಿರುಗಿದಳು. ಯಾರು ಆಪತ್ತಿಗೆ ಕರೆದರೆ ಅವರ ಮನೆಯಲ್ಲಿ ಬಿಡಾರ. ಕರೆದವರ ಮನೆಯ ತುರ್ತು ಮುಗಿಯುವುದರೊಳಗೆ ಮತ್ತೊಂದು ಕಡೆಯಿಂದ ಆಹ್ವಾನ. ಮೈಮುರಿದು ದುಡಿಯುವವರಿಗೆ ಯಾವತ್ತೂ ಕೆಲಸ ಇಲ್ಲ ಅಂತಾಗುವುದಿಲ್ಲ ಎಂಬುದನ್ನು ಮನಗಂಡಿದ್ದ ದೇವಕಿ ಅದನ್ನು ಚಾಚೂ ತಪ್ಪದೆ ಪಾಲಿಸಿದಳು. ಹೋದ ಕಡೆಯಲ್ಲಿ ಅವಳಿಗೆ ತುತ್ತು ಅನ್ನ ಕಮ್ಮಿಯಾದರೂ, ಕೊಡುವ ಕೂಲಿಯಲ್ಲಿ ಚೌಕಾಶಿ ಮಾಡಿದರೂ, ಮಗನ ಆರೈಕೆಗೆ ಮಾತ್ರ ಕೊರೆಯಾಗುವಂತಿರಲಿಲ್ಲ. ಬೇಕಾದ್ದನ್ನು ಬಾಯ್ಬಿಟ್ಟು ಬೇಡಿ ಪಡೆದು ಮಗನನ್ನು ಎದೆಗಪ್ಪಿಕೊಂಡು ಸಾಕುತ್ತಿದ್ದಳು ದೇವಕಿ. ಅವಳ ಒಣ ಬದುಕಿನಲ್ಲಿ ಮಗನೇ ಆಶಾಕಿರಣ. ಬದುಕುವುದಕ್ಕೆ ಒಂದು ಅರ್ಥ ಕಲ್ಪಿಸಿಕೊಟ್ಟವನು. ಯಾವ ದೇವರನ್ನು ದೇವಕಿ ಎನ್ನುವ ಅಮ್ಮ ಹೊಗಳಿ ಅಟ್ಟಕ್ಕೇರಿಸಿ ಕೂರಿಸಿದ್ದಳೋ ಆ ದೇವರು ದೇವಕಿಯ ಕೈ ಹಿಡಿಯಲಿಲ್ಲ. ಮೂರೋ, ನಾಲ್ಕೋ ವರ್ಷ ಅಮ್ಮನ ಮಡಿಲಲ್ಲಿ ಆಡಿ ಬೆಳೆದ ಕಂದನಿಗೆ ಯಾವುದೋ ಕಾಯಿಲೆ ಅಂಟಿಕೊಂಡಿತು. ಕಂಗಾಲಾದಳು ದೇವಕಿ. ಪಂಡಿತರ ಮದ್ದು ಕೆಲಸ ಮಾಡದೆ ಹೊಟ್ಟೆ ಥುಮ್ಮಣ್ಣ, ಕೈಕಾಲು ಕಡ್ಡಿ ಆದ ಮಗು ಒಂದು ದಿನ ಅಮ್ಮನ ಮಡಿಲಲ್ಲಿ ಪ್ರಾಣಬಿಟ್ಟಿತು. ತಲೆ ಕೆಟ್ಟು ಬೀದಿ ಬೀದಿ ಅಲೆಯುತ್ತಾಳೆ ದೇವಕಿ ಅಂದುಕೊಂಡಿದ್ದರಂತೆ ಜನ. ಗಂಡನ ಮನೆಯವರು ಸೇರು ಹಾಲು ಕುಡಿದು ಹಬ್ಬ ಮಾಡಿರುತ್ತಾರೆ ಅಂತಲೂ ಅಂದುಕೊಂಡಿದ್ದರು. ಹಾಗೇನಾಗಲಿಲ್ಲ. ದೇವಕಿ ದೇವರು ಕೊಡಮಾಡಿದ ಈ ಕಾರ್ಕೋಟಕ ವಿಷವನ್ನೂ ಜೀರ್ಣಿಸಿಕೊಂಡಳು. ನಿಧನಿಧಾನವಾಗಿ ಚೇತರಿಸಿಕೊಂಡಳು.

'ಒಂದು ಲೆಕ್ಕಕ್ಕೆ ಒಳ್ಳೇದೇ ಆಯ್ತು ಕಣ್ರೀ. ಮಸಲಾ ನಾನು ಹೋಗಿ ಅದೇನಾರೂ ಉಳ್ಕಂಡಿದ್ರೆ ಹೊಟ್ಟೆಗಿಲ್ದೆ ನರಳಿ ಸಾಯೋ ಪರಿಸ್ಥಿತಿ ಬರ್ತಿತ್ತೇನೋ. ಇನ್ನು ನಂಗೆ ಯಾವ ಕುಣಿಕೇನೂ ಇಲ್ಲಾ? ಇದ್ರೂ ಸಮ, ಸತ್ರೂ ಸಮ' ಅಂದಿದ್ದಳಂತೆ ದೇವಕಿ. ಕೆಲವರ ಜಾಯಮಾನವೇ ಅಂತಾದ್ದು. ಎಂಥಾ ಸಂದರ್ಭದಲ್ಲೂ ಎದೆಗೆಡುವುದಿಲ್ಲ ಅವರು. ಕಷ್ಟಗಳಿಗೆ ಅಂಜುವುದಿಲ್ಲ. ಜೀವನ್ಮುಖಿಗಳೆಂದರೆ ಮತ್ತ್ಯಾರು?

ಎಷ್ಟು ಕ್ಷುಲ್ಲಕ ಕಾರಣ, ಆದರೆ ಎಷ್ಟು ದುಬಾರಿ ಬೆಲೆ. ಬದುಕಿ ಬಾಳಬೇಕಾಗಿದ್ದ ಅವೆಷ್ಟು ಮಕ್ಕಳು ಆ ಕಾಲಮಾನದಲ್ಲಿ ಲಿವರ್ ಕಾಯಿಲೆಗೆ ಬಲಿಯಾದರೋ ಲೆಕ್ಕ ಇಲ್ಲ. ಹಿತ್ತಾಳೆ ದಬರಿಯಲ್ಲಿ ಕಾಯಿಸುತ್ತಿದ್ದ ಹಾಲು ಎಳೆ ಮಕ್ಕಳಿಗೆ ವಿಷವಾಗಿ ಇಂತಹ ಅನಾಹುತ ನಡೆಯುತ್ತಿತ್ತು